MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 11-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಇಳಿಕೆ ಅಕ್ಟೋಬರ್ 1-10 ರ ಮಲೇಶಿಯನ್ ಪಾಮೆಣ್ಣೆ ರಫ್ತು 17 ಶೇಕಡಾ ಕುಸಿತ

ಮಲೇಶಿಯಾದ ಪಾಮೆಣ್ಣೆ ರಫ್ತು ಅಕ್ಟೋಬರ್ 1-10 ರ ತನಕ ಅವಧಿಯಲ್ಲಿ ಹಿಂದಿನ ತಿಂಗಳ ಅವಧಿಯಲ್ಲಿದ್ದ 423,912 ಟನ್‌ಗಳಿಂದ 350,767 ಟನ್‌ಗಳಿಗೆ 17 ಶೇಕಡಾ ಕುಸಿತವಾಗಿದ್ದು, ಸತತ ಏಳು ದಿನಗಳ ಏರಿಕೆಯಾಗಿದ್ದ ಫ್ಯೂಚರ್ ದರ 65 ರಿಂಗಿಟ್ಸ್ ಅಥವಾ 1.72 ಶೇಕಡಾ ಇಳಿಕೆ ಕಂಡಿದೆ.

## ಸೆಪ್ಟೆಂಬರ್ ತಿಂಗಳ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 3 ವರ್ಷಗಳ ಗರಿಷ್ಠ ಮಟ್ಟಕ್ಕೆ

ಮಲೇಶಿಯನ್ ಪಾಮೆಣ್ಣೆ ಬೋರ್ಡ್ ಅಂಕಿಅಂಶಗಳಂತೆ ಮಲೇಶೀಯಾದ ಸೆಪ್ಟೆಂಬರ್ 2022 ರ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು 2019 ಅಕ್ಟೋಬರ್ ತಿಂಗಳ ನಂತರ ಹಿಂದಿನ 3 ವರ್ಷಗಳಲ್ಲೇ ಗರಿಷ್ಠ ಮಟ್ಟ ತಲುಪಿ 2.32 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ದಾಸ್ತಾನು 10.54 ಶೇಕಡಾ ಹೆಚ್ಚಳವಾಗಿದ್ದು, ಉತ್ಪಾದನೆ 2.6 ಶೇಕಡಾ ಹೆಚ್ಚಳದೊಂದಿಗೆ 1.77 ಮಿಲಿಯನ್ ಟನ್‌ಗಳಾಗಿವೆ. ರಫ್ತು 9.25 ಶೇಕಡಾ ಹೆಚ್ಚಳದೊಂದಿಗೆ 1.42 ಮಿಲಿಯನ್ ಟನ್‌ಗಳಾಗಿವೆ. ಇದು 2021 ಸೆಪ್ಟೆಂಬರ್ ನಂತರದ ಗರಿಷ್ಠ ಮಟ್ಟವಾಗಿದೆ. ಭಾರತದ ಆಮದು ಹಿಂದಿನ ತಿಂಗಳುಗಳಲ್ಲಿ ಹೆಚ್ಚಳವಾಗಿ ಆಂತರಿಕ ದಾಸ್ತಾನು ಹೆಚ್ಚಳವಿದ್ದು, ಇನ್ನು ಆಮದು ಇಳಿಕೆಯಾಗುವ ಸಾಧ್ಯತೆಗಳಿವೆಯೆನ್ನಲಾಗಿದೆ. ಹಬ್ಬಗಳ ಸೀಜನ್ ಮುಗಿಯುತ್ತಿರುವುದರಿಂದ ಮುಂದಿನ ತಿಂಗಳಲ್ಲಿ ಭಾರತದ ದೇಶೀ ಖಾದ್ಯ ತೈಲ ಬಳಕೆ ಬಳಕೆಯಾಗುವ ಸಾಧ್ಯತೆಗಳಿವೆ. ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಇಳಿಕೆಯಾಗುವ ಸಾಧ್ಯತೆಗಳಿವೆ.

## ಬೇಡಿಕೆ ಹೆಚ್ಚಳ ನಿರೀಕ್ಷೆಯಿಂದ ಅರಸಿನ ದರ ಹೆಚ್ಚಳ

ದುರ್ಬಲ ಪೂರೈಕೆ ಹೆಚ್ಚಿದ ಹಬ್ಬದ ಬೇಡಿಕೆಯಿಂದ ಅರಿಸಿನ ದರ ಹೆಚ್ಚಳವಾಗಿದೆ. ಪೂರೈಕೆ ಹಿಂದಿನ ವರ್ಷದ ಈ ಅವಧಿಗಿಂತ ಈ ವರ್ಷ 26 ಶೇಕಡಾ ಇಳಿಕೆಯಾಗಿದೆ. ಹಿಂದಿನ ವರ್ಷ ನವೆಂಬರ್ ತಿಂಗಳಲ್ಲಿ 15758 ಟನ್ ಆವಕವಾಗಿದ್ದು ಈ ವರ್ಷ 11248 ಟನ್‌ಗಳಿಗೆ ಇಳಿಕೆಯಾಗಿದೆ. ಆದರೆ ಈ ವರ್ಷ ಬಿತ್ತನೆ ಹಿಂದಿನ ವರ್ಷದ 1.66 ಲಕ್ಷ ಹೆಕ್ಟೇರ್ ಗಳಿಂದ 1.70 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆ. ರಫ್ತು 2022 ಎಪ್ರಿಲ್‌ನಿಂದ ಜುಲೈ ಅವಧಿಯಲ್ಲಿ 17.72 ಶೇಕಡಾ ಹೆಚ್ಚಳವಾಗಿ 62245.73 ಟನ್‌ಗಳಾಗಿವೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 52875.44 ಟನ್ ರಫ್ತಾಗಿತ್ತು. ರಫ್ತು ಹಾಗೂ ದೇಶೀ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳದಲ್ಲಿ ಮುಂದುವರಿಯುವ ನಿರೀಕ್ಷೆಯಿದೆ.

## ಜೀರಿಗೆ ಉತ್ತಮ ದೇಶೀ ಹಾಗೂ ರಫ್ತು ಬೇಡಿಕೆ

ಜೀರಿಗೆ ದರ ಹಿಂದಿನ ವರ್ಷ ಈ ಅವಧಿಯಲ್ಲಿದ್ದುದರಿಂದ ಈಗ ಹೆಚ್ಚಳವಿದ್ದು, ಉತ್ತಮ ದೇಶೀ ಹಾಗೂ ರಫ್ತು ಬೇಡಿಕೆಯಿಂದ ದರ ಇನ್ನೂ ಹೆಚ್ಚಳದ ನಿರೀಕ್ಷೆಯಿದೆಯೆನ್ನಲಾಗಿದೆ. 2021-22 ಸೀಸನ್ ನಲ್ಲಿ ಉತ್ಪಾದನೆ ಹಿಂದಿನ ವರ್ಷದ 8 ಮಿಲಿಯನ್ ಚೀಲಗಳಿಂದ (ತಲಾ 55 ಕೆ.ಜಿ) 5 ಮಿಲಿಯನ್ ಚೀಲಗಳಿಗೆ ಇಳಿಕೆಯಾದುದರಿಂದ ದರ ಹೆಚ್ಚಳವಾಗಿದ್ದು ಬೇಡಿಕೆ ಹೆಚ್ಚಳವೂ ದರ ಹೆಚ್ಚಳಕ್ಕೆ ಕಾರಣವಾಗಿದ್ದು, ಮುಂದಿನ ಬೆಳೆಯಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಮುಂದಿನ ಬೆಳೆಯ ಕಟಾವು ಮಾರುಕಟ್ಟೆಗೆ ಆವಕವಾಗಲಾರಂಭವಾದಾಗ ದರ ಇಳಿಕೆ ಕಾಣುವ ಸಾಧ್ಯತೆಯಿದೆ.